ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2514
ಮಾನ್ಯ ಸದಸ್ಯರ ಹೆಸರು	ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	31.03.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕೇಂದ್ರ ಸರ್ಕಾರವು ಜಸ್ಟಿಸ್ ಜಿ.ರೋಹಿಣಿಯವರ ನೇತೃತ್ವದಲ್ಲಿ ಇತರೆ ಹಿಂದುಳಿದ ವರ್ಗಗಳಲ್ಲಿ ಒಳ ಮೀಸಲಾತಿಯನ್ನು ಗುರುತಿಸಿ, ಶಿಫಾರಸ್ಸು ಮಾಡಲು ಆಯೋಗವನ್ನು ರಚಿಸಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ)	ಬಂದಿದ್ದಲ್ಲಿ, ಈ ಆಯೋಗವು ಸರ್ಕಾರದಿಂದ ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಬಗ್ಗೆ ಕೋರಿರುವ ಅಂಕಿ-ಅಂಶ, ಆಯೋಗದ ವರದಿಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಹಾಗೂ ಸರ್ಕಾರದಿಂದ ಒದಗಿಸಿರುವ ಮಾಹಿತಿಗಳ ಬಗ್ಗೆ ಪೂರ್ಣ ಮಾಹಿತಿ ನೀಡುವುದು;	ಜಸ್ಟೀಸ್ ಜಿ. ರೋಹಿಣಿಯವರ ನೇತೃತ್ವದ Commission to Examine Sub-Categorization of OBCs (CESOB) ಆಯೋಗವು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳ ಜಾತಿಪಟ್ಟಿಯಲ್ಲಿರುವ ಜಾತಿಗಳ ಬಗ್ಗೆ ಆಕ್ಷೇಪಣೆ ಮಾಡಿದ್ದು, ಸದರಿ ಆಕ್ಷೇಪಣೆಗಳಿಗೆ ಆಯೋಗದ ಅಭಿಪ್ರಾಯ ನೀಡುವಂತೆ ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ CESOB ಆಯೋಗವು ಕೋರಿರುವ ಎಲ್ಲಾ ಆಕ್ಷೇಪಣೆಗಳಿಗೆ ಮಾಹಿತಿ/ಅಭಿಪ್ರಾಯವನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಿದ್ಧಪಡಿಸಿ ವರದಿಯನ್ನು ದಿನಾಂಕ:02.06.2021ರಂದು ಇ-ಮೇಲ್ ಮೂಲಕ CESOB, New Delhi, ಇವರಿಗೆ ಮಾಹಿತಿಯನ್ನು ಸಲ್ಲಿಸಲಾಗಿದೆ.
ಇ)	ಈ ಆಯೋಗವು ರಾಜ್ಯಕ್ಕೆ ಭೇಟಿ ನೀಡಿ, ಹಿಂದುಳಿದ ಸಮುದಾಯದ ಮುಖಂಡರಿಂದ, ಸಂಘ-ಸಂಸ್ಥೆಗಳಿಂದ, ರಾಜ್ಯ ಸರ್ಕಾರದ ಪ್ರತಿನಿಧಿಗಳಿಂದ ಹಾಗೂ ಇತರ ಹಿತಾಸಕ್ತಿಯುಳ್ಳವರಿಂದ ಅಭಿಪ್ರಾಯ, ಸಲಹೆ-ಸೂಚನೆ ಪಡೆದಿದೆಯೇ? (ಸಂಪೂರ್ಣ ವಿವರ ನೀಡುವುದು)	ಪಡೆದಿರುವುದಿಲ್ಲ.

ಸಂಖ್ಯೆ:ಹಿಂವಕ 109 ಬಿಸಿಎ 2021

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು